# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1164**
ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರಕ್ಷೇತ್ರ)
ಉತ್ತರಿಸುವ ದಿನಾಂಕ : 13-03-2026
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರ ಪ್ರತಿ ವರ್ಷ ರಾಜ್ಯದ ರೈತರು ಬೆಳೆದ ಎಷ್ಟು ಬೆಳೆ ಕಾಳುಗಳನ್ನು ರಫ್ತು ಮಾಡುತ್ತಿದೆ; (ಕಳೆದ 3 ವರ್ಷದಲ್ಲಿ ರಾಜ್ಯದಿಂದ ರಫ್ತು ಮಾಡಿರುವ ಬೇಳೆ ಕಾಳುಗಳ ವಿವರಗಳನ್ನು ಒದಗಿಸುವುದು) | ಅಪೆಡಾ ಸಂಸ್ಥೆ, ಬೆಂಗಳೂರು ರವರು ನೀಡಿರುವ ಮಾಹಿತಿಯಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಿಂದ ರಫ್ತು ಆದ ಬೇಳೆಕಾಳುಗಳು ಪ್ರಮಾಣ<br>(ಮೆ.ಟನ್‌ಗಳಲ್ಲಿ)<br>2022-23: 415.36<br>2023-24: 470.36<br>2024-25: 686.67 |
| ಆ) | ರಾಜ್ಯಕ್ಕೆ ಪ್ರತಿ ವರ್ಷ ಆಮದು ಮಾಡಿಕೊಳ್ಳುತ್ತಿರುವ ಬೇಳೆ ಕಾಳುಗಳು ಎಷ್ಟು; ಇದರಿಂದ ನಮ್ಮ ರಾಜ್ಯದ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಅಪೆಡಾ ಸಂಸ್ಥೆಯು ನೀಡಿರುವ ವರದಿಯಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಿಂದಲೇ ಬೇಳೆ ಕಾಳುಗಳನ್ನು ಇತರೆ ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿದೆ. ಕೇಂದ್ರ ಸರ್ಕಾರವು ಅಮೇರಿಕಾ ಮೊದಲಾದ ದೇಶಗಳಿಂದ ಬೇಳೆ ಕಾಳುಗಳನ್ನು ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿರುವುದು ತಿಳಿದುಬಂದಿರುವುದಿಲ್ಲ. |
| ಇ) | ಕೇಂದ್ರ ಸರ್ಕಾರ ಬೇಳೆ ಕಾಳುಗಳನ್ನು ಆಮದು ಮಾಡಿಕೊಳ್ಳುವ ಕುರಿತು ಅಮೇರಿಕ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದಿಂದ ರಾಜ್ಯದ ರೈತರಿಗೆ ಆಗಬಹುದಾದ ತೊಂದರೆಗಳನ್ನು ರಾಜ್ಯ ಸರ್ಕಾರ ಅಂದಾಜು ಮಾಡಿರುತ್ತದೆಯೇ; (ವಿವರಗಳನ್ನು ಒದಗಿಸುವುದು) | |
| ಈ) | ಕೇಂದ್ರ ಸರ್ಕಾರ ಪ್ರತಿ ವರ್ಷ ಬೇಳೆ ಕಾಳುಗಳನ್ನು ಬೆಳೆಯಲು ರಾಜ್ಯದ ತೋಟಗಾರಿಕೆ ಇಲಾಖೆಗೆ ನೀಡುತ್ತಿರುವ ಅನುದಾನಗಳು ಎಷ್ಟು; ಕೇಂದ್ರ ಸರ್ಕಾರದಿಂದ ಬರಬೇಕಾದ ಬಾಕಿ | ಕೇಂದ್ರ ಸರ್ಕಾರವು ಬೇಲೆ ಕಾಳುಗಳನ್ನು ಬೆಳೆಯಲು ತೋಟಗಾರಿಕೆ ಇಲಾಖೆಗೆ ಯಾವುದೇ ಅನುದಾನ ನೀಡುತ್ತಿಲ್ಲ. |

| | | |
|---|---|---|
| | ಅನುದಾನಗಳು ಎಷ್ಟು; (ವಿವರಗಳನ್ನು ಒದಗಿಸುವುದು) | |
| ಉ) | ರಾಜ್ಯದ ಎಣ್ಣೆಕಾಳು ಬೆಳೆಯುವ ರೈತರಿಗೆ ಕೇಂದ್ರದಿಂದ ಯಾವ ಯಾವ ಯೋಜನೆಗಳನ್ನು ನೀಡಲಾಗಿದೆ; ಈ ಯೋಜನೆಗಳಲ್ಲಿ ರಾಜ್ಯದ ರೈತರಿಗೆ ದೊರೆಯುತ್ತಿರುವ ಅನುದಾನ ಮತ್ತು ಸಹಾಯಧನಗಳು ಎಷ್ಟು? (ವಿವರ ಒದಗಿಸುವುದು) | ಖಾದ್ಯ ತೈಲಗಳ ಆಮದು ಕಡಿಮೆ ಮಾಡಲು, ದೇಶೀಯ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಲು ಹಾಗೂ ರೈತರ ಆದಾಯ ಸುಧಾರಣೆಯೊಂದಿಗೆ ಆತ್ಮನಿರ್ಭರತೆ ಸಾಧಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ- ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.<br><br>2025-26 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿರುವ ಘಟಕಗಳ ಮತ್ತು ರೈತರಿಗೆ ದೊರೆಯುತ್ತಿರುವ ಸಹಾಯಧನ ವಿವರ ಈ ಕೆಳಗಿನಂತಿದೆ.<br><br>1. **ಮೌಲ್ಯ ಸರಪಳಿ ಗುಚ್ಛಗಳಲ್ಲಿ ಬಿತ್ತನೆ ಬೀಜ ವಿತರಣೆ**: ಕೇಂದ್ರ ಸರ್ಕಾರ ನಿಗಧಿಪಡಿಸಿದ ಸಹಾಯಧನದಡಿ ಈವರೆಗೆ 28773 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು (ನೆಲಗಡಲೆ, ಸೂರ್ಯಕಾಂತಿ, ಸೋಯಾಅವರೆ, ಕುಸುಬೆ, ಹರಳು) ವಿತರಿಸಲಾಗಿದೆ.<br>2. **ಗುಚ್ಛ ಪ್ರಾತ್ಯಕ್ಷಿಕೆಗಳು**: ನೆಲಗಡಲೆ, ಸೂರ್ಯಕಾಂತಿ, ಸೋಯಾಅವರೆ, ಕುಸುಬೆ, ಹರಳು ಬೆಳೆಗಳಲ್ಲಿ ಒಟ್ಟು 8609 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿದೆ.<br>• ನೆಲಗಡಲೆ ಪ್ರಾತ್ಯಕ್ಷಿಕೆ (ಪ್ರತಿ ಹೆ) : ರೂ. 14,000/- ಸಹಾಯಧನ<br>• ಸೋಯಾ ಅವರೆ ಪ್ರಾತ್ಯಕ್ಷಿಕೆ (ಪ್ರತಿ ಹೆ) : ರೂ. 10,000/- ಸಹಾಯಧನ<br>• ಸೂರ್ಯಕಾಂತಿ ಪ್ರಾತ್ಯಕ್ಷಿಕೆ (ಪ್ರತಿ ಹೆ): ರೂ. 9,000/- ಸಹಾಯಧನ |

| | | |
|---|---|---|
| | | • ಕುಸುಬೆ & ಹರಳು ಪ್ರಾತ್ಯಕ್ಷಿಕೆ (ಪ್ರತಿ ಹೆ): ರೂ. 8,000/- ಸಹಾಯಧನ<br>3. **ರೈತ ತರಬೇತಿಗಳು** -2 ದಿನದ ತರಬೇತಿಗೆ ರೂ. 30,000/- ರಂತೆ ಈವರೆಗೆ ಒಟ್ಟು 760 ರೈತ ತರಬೇತಿ ಆಯೋಜಿಸಲಾಗಿದೆ<br>4. **ರೈತ ಕ್ಷೇತ್ರ ಪಾಠಶಾಲೆ**: ಪ್ರತಿ ಪಾಠಶಾಲೆಗೆ ರೂ. 35,000/- ರಂತೆ ಈವರೆಗೆ ಒಟ್ಟು 29 ರೈತ ಪಾಠಶಾಲೆಗಳನ್ನು ಆಯೋಜಿಸಲಾಗಿದೆ.<br>5. **ಕೋಯ್ಲೋತ್ತರ ಚಟುವಟಿಕೆಗೆ ಮೂಲಸೌಕರ್ಯ ಬೆಂಬಲ**: ಯೋಜನಾ ವೆಚ್ಚದ ಶೇ. 33 ರಷ್ಟು ಸಹಾಯಧನ (ರೂ. 9,90,000 ಗರಿಷ್ಟ ಮಿತಿಯೊಂದಿಗೆ) ಮತ್ತು ಒಟ್ಟು 28 ಘಟಕಗಳ ಅನುಷ್ಠಾನ ಗುರಿ ನೀಡಲಾಗಿದೆ.<br><br>ಸದರಿ ಯೋಜನೆಯಡಿ ಇದುವರೆಗೂ ರೂ. 34.66 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ರೂ. 30.71 ಕೋಟಿಗಳ ವೆಚ್ಚ ಭರಿಸಲಾಗಿದೆ. |

*ಕೃ ಇ 76 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು